ಅ) ಪಿರಿಯಾಪಟ್ಟಣ ನಗರದಲ್ಲಿ ನಿರ್ಮಿಸಲಾಗಿರುವ ಅಂಬೇಡ್ಕರ್ ಭವನದ ಕಾಮಗಾರಿ ಪೂರ್ಣಗೊಂಡಿದ್ದು ಯಾವಾಗ;

ಆ) ತಹಲ್‌ವರೆವಿಗೂ ಅಂಬೇಡ್ಕರ್ ಭವನದ ಉದ್ಘಾಟನೆ ಮಾಡದಿರಲು ಕಾರಣವೇನು;

ಇ) ಯಾವಾಗ ಉದ್ಘಾಟನೆ ಮಾಡಿ ಸಾರ್ವಜನಿಕ ಉಪಯೋಗಕ್ಕೆ ಬಿಡಲಾಗುವುದು;

ಈ) ಅಂಬೇಡ್ಕರ್ ಭವನಕ್ಕೆ ಕಾಂಪೌಂಡ್ ಗೋಡೆ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಲಾಗಿದೆಯೇ;

ಉ) ಬಿಡುಗಡೆ ಮಾಡಿದ್ದಲ್ಲಿ, ಕಾಮಗಾರಿಯು ಯಾವ ಹಂತದಲ್ಲಿದೆ;

ಊ) ಈ ಅಂಬೇಡ್ಕರ್ ಭವನದ ನಿರ್ವಹಣೆಯನ್ನು ಯಾರಿಗೆ ವಹಿಸಲು ಸರ್ಕಾರ ಉದ್ದೇಶಿಸಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಪಿರಿಯಾಪಟ್ಟಣ ನಗರದಲ್ಲಿ ಅಂಬೇಡ್ಕರ್ ಭವನದ ಕಾಮಗಾರಿ 22–3–2000ರಂದು ಪೂರ್ಣಗೊಂಡಿದೆ.

ಆ) ಅಂಬೇಡ್ಕರ್ ಭವನದ ಕಾಂಪೌಂಡ್ ಗೋಡೆ ಪೂರ್ಣಗೊಂಡಿಲ್ಲವಾದ್ದರಿಂದ ಇನ್ನೂ ಉದ್ಘಾಟನೆ ಮಾಡಿರುವುದಿಲ್ಲ.

ಇ) ಆವರಣ ಗೋಡೆಯ ಕಾಮಗಾರಿ ಕೆಲಸ ಪೂರ್ಣಗೊಂಡ ನಂತರ ಉದ್ಘಾಟನೆ ಮಾಡಲಾಗುವುದು.

ಈ) ಅಂಬೇಡ್ಕರ್ ಭವನದ ಆವರಣ ಗೋಡೆ ಕಾಮಗಾರಿಗೆ ರೂ. 2.65 ಲಕ್ಷಗಳ ಅಂದಾಜು ನಕ್ಷೆಗೆ ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿ, ಸರ್ಕಾರವು ರೂ. 2.00 ಲಕ್ಷಗಳನ್ನು ಬಿಡುಗಡೆಗೊಳಿಸಿದೆ. ಉಳಿದ ಹಣವನ್ನು ಸ್ಥಳೀಯ ಮೂಲಗಳಿಂದ ಭರಿಸಿಕೊಳ್ಳಲು ಸೂಚಿಸಲಾಗಿದೆ.

ಉ) ಕಟ್ಟಡ ಕಾಮಗಾರಿ ಮುಕ್ತಾಯವಾಗಿದೆ. ಆವರಣ ಗೋಡೆ ಕಾಮಗಾರಿ ನಿರ್ಮಾಣ ಹಂತದಲ್ಲಿದೆ.

ಊ) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರ ಕಲ್ಯಾಣಕ್ಕಾಗಿ ಮೀಸಲಿರಿಸಿದ ಶೇ. 18ರ ಹಣದಲ್ಲಿ ಮಿನಿ ಅಂಬೇಡ್ಕರ್ ಭವನದ ನಿರ್ವಹಣೆಯನ್ನು ಸ್ಥಳೀಯ ಸಂಸ್ಥೆಗಳಿಗೆ ವಹಿಸಲು ಪರಿಶೀಲಿಸಲಾಗುತ್ತಿದೆ.

ವಕ್ಫ್ ನಿಧಿಯಿಂದ ಬಿಜಾಪುರ ಜಿಲ್ಲೆಗೆ ಬಿಡುಗಡೆಯಾದ ಹಣ

321 (2923) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಕ್ಫ್ ನಿಧಿಯಿಂದ ಕಳೆದ 3 ವರ್ಷಗಳಲ್ಲಿ ವಿವಿಧ ಸಂಸ್ಥೆಗಳಿಗೆ ವಿತರಿಸಿರುವ ಹಣ ಎಷ್ಟು; ವರ್ಷಾವಾರು ಹಾಗೂ ಜಿಲ್ಲಾವಾರು ವಿವರಗಳನ್ನು ನೀಡುವುದು;

ಆ) ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಸಂಸ್ಥೆಗಳಿಗೆ ಹಣವನ್ನು ಬಿಡುಗಡೆ ಮಾಡಲಾಗಿದೆ;

ಇ) ಇತರೆ ಜಿಲ್ಲೆಗಳಿಗೆ ಹೋಲಿಸಿದಲ್ಲಿ ಬಿಜಾಪುರ ಜಿಲ್ಲೆಗೆ ಹೆಚ್ಚು ಹಣ ಒದಗಿಸಿರುವ ಕಾರಣವೇನು, ಸಚಿವರ ಸ್ವಂತ ಜಿಲ್ಲೆಯಾಗಿರುವುದರಿಂದ, ಹೆಚ್ಚು ಹಣ ಒದಗಿಸಲಾಗಿದೆಯೆ;

ಈ) ಹಣ ವಿತರಿಸುವಲ್ಲಿ ತಾರತಮ್ಯ ಅನುಸರಿಸುತ್ತಿರುವುದು ನಿಜವೆ; ಎಲ್ಲಾ ಜಿಲ್ಲೆಗಳಿಗೂ ಸಮನಾಗಿ ಹಣ ವಿತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದ ವಕ್ಫ್ ಸಂಸ್ಥೆಗಳಿಗೆ ಬಿಡುಗಡೆ ಮಾಡಿರುವ ಸಹಾಯಾನುದಾನದ ವಿವರ ಈ ಕೆಳಗಿನಂತಿದೆ. (ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ)

ರೂ. ಲಕ್ಷಗಳಲ್ಲಿ

1. 2000–01 285.00 ಲಕ್ಷಗಳು
2. 2001–02 294.00 ಲಕ್ಷಗಳು
3. 2002–03 400.00 ಲಕ್ಷಗಳು

ವರ್ಷ	ವಕ್ಫ್‌ಗಳ ಸಂಖ್ಯೆ	ಮೊತ್ತ
1. 2000–01	44	11,00,000–00
2. 2001–02	50	12,60,000–00
3. 2002–03	207	69,85,000–00

ಇ) ಬಿಜಾಪುರ ಜಿಲ್ಲೆಯಲ್ಲಿ ಒಟ್ಟು 1533 ವಕ್ಫ್ ಸಂಸ್ಥೆಗಳಿದ್ದು, ಅಂದರೆ ಮಸೀದಿಗಳು, ದರ್ಗಾ ಖಬ್ರಸ್ತಾನ್, ಅಶುರಖಾನಾ ಹಾಗೂ ಈದಗಾಗಳಿದ್ದು, ಕಳೆದ 6 ವರ್ಷಗಳಿಂದ 1996–97 ರಿಂದ 2001–02ರ ವರೆಗೆ ಬಿಜಾಪುರ ಜಿಲ್ಲೆಗೆ ಕೇವಲ 61.65 ಲಕ್ಷ ರೂ.ಗಳನ್ನು ಮಾತ್ರ ಅನುದಾನ ನೀಡಲಾಗಿತ್ತು. ಬೇರೆ ಜಿಲ್ಲೆಗಳಿಗಿಂತ ಬಿಜಾಪುರ ಜಿಲ್ಲೆಯಲ್ಲಿ ಮುಸ್ಲಿಂ ಜನಸಂಖ್ಯೆಯ ಸಾಂದ್ರತೆ ಹೆಚ್ಚಾಗಿರುವ ಕಾರಣ, ಅದಕ್ಕೆ ಅನುಗುಣವಾಗಿ ಹಾಗೂ ಈ ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದ ಇರುವ ಕೆಲವು ಮಸೀದಿಗಳು, ದರ್ಗಾ ಇವುಗಳನ್ನು ದುರಸ್ತಿ ಮಾಡದೇ ತುಂಬಾ ದುಸ್ಥಿತಿಯಲ್ಲಿರುವುದನ್ನು ಮನಗಂಡು, 2002–03ನೇ ಸಾಲಿನಲ್ಲಿ ಈ ಜಿಲ್ಲೆಗೆ ಬೇರೆ ಜಿಲ್ಲೆಗಳಿಗಿಂತ ಸ್ವಲ್ಪ ಮಟ್ಟಿಗೆ ಹೆಚ್ಚಾಗಿ ಅನುದಾನ ನೀಡಲಾಗಿದೆ: ಹೊರತು ಬೇರೆ ಯಾವುದೇ ಕಾರಣವಿಲ್ಲ.

ಈ) ಮೇಲೆ ತಿಳಿಸಿರುವಂತೆ ಹಣ ವಿತರಿಸುವಲ್ಲಿ ಯಾವುದೇ ತಾರತಮ್ಯ ಆಗಿರುವುದಿಲ್ಲ. ವಕ್ಫ್ ಸಂಸ್ಥೆಗಳಿಂದ ಬರುವ ಬೇಡಿಕೆಗಳ ಆಧಾರದ ಮೇಲೆ ಹಣದ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಆದಷ್ಟು ಮಟ್ಟಿಗೆ ಸಮನಾಗಿ ಅನುದಾನ ವಿತರಿಸಲಾಗುತ್ತಿದೆ.

ಬಾಗೇಪಲ್ಲಿ ಕ್ಷೇತ್ರದಲ್ಲಿ ಅಂತರ್ಜಲದ ಮಟ್ಟ ಕುಸಿದಿರುವುದು

322 (2929) : ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಅಂತರ್ಜಲ ಮಟ್ಟವು ತೀವ್ರ ರೀತಿಯಲ್ಲಿ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಈ ಭಾಗದ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು ಹಾಗೂ ಎಷ್ಟು ಹಣವನ್ನು ಇದಕ್ಕಾಗಿ ವ್ಯಯ ಮಾಡಲಾಗಿದೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ಹೌದು.

ಆ) ಬಾಗೇಪಲ್ಲಿ ಕ್ಷೇತ್ರದಲ್ಲಿ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಇದುವರೆವಿಗೆ ಹಮ್ಮಿಕೊಂಡಿರುವುದಿಲ್ಲ. ಆದರೆ, ಜಲ ಸಂಪನ್ಮೂಲ